ಶ್ರೀ ಕೆ. ಹನುಮಂತಯ್ಯ.—ಅಂಥ ವಿಷಯಗಳು ಯಾವುವೂ ನಮ್ಮ ಅವಗಾಹನೆಗೆ ಬಂದಿಲ್ಲ.

ಶ್ರೀ ಎ. ಆರ್. ನಾಯ್ಡು.—ಡಿಸ್ಟ್ರಿಕ್ಟ್ ಬೋರ್ಡ್ ಮತ್ತು ಮುನಿಸಿಪಾಲಿಟಿ, ಕಾರ್ಪೊರೇಷನ್ ಇಂಥಾ ಸಂಸ್ಥೆಗಳಲ್ಲಿ ಕೆಲಸಮಾಡತಕ್ಕ ನೌಕರ್ಯರು ಪೆನ್ಷನ್‌ಗೆ ನಿಲ್ಲಬೇಕಾಗಿದ್ದರೆ ಅವರ ವಯಸ್ಸು 55 ವರ್ಷಕ್ಕೆ ಮೀರಿರಬಾರದೆಂದು ಒಂದು ಕಾನೂನು ತರುತ್ತಾರೆಂದು ಕೇಳುತ್ತೇನೆ. ಇದು ನಿಜವೇ ?

ಶ್ರೀ ಕೆ. ಹನುಮಂತಯ್ಯ.—ತಾವು ಒಂದು ಹೆಚ್ಚಿನ ವೇಟ್ ಮನೊಡೆಯನ್ನು ತಂದರೆ ಆಲೋಚನೆ ಮಾಡೋಣ.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ಲಂಚನಿರೋಧ ಇಲಾಖೆಯವರು ಲಂಚನಿರೋಧ ಕೇಸುಗಳ ಬಗ್ಗೆ ಅವರನ್ನು ಕೆಲಸದಿಂದ ನಿವೃತ್ತಿ ಮಾಡಬೇಕೆಂದು ಸರ್ಕಾರಕ್ಕೆ ಶಿಫಾರ್ಸ್ ಮಾಡಿದ್ದರೆ ಸರ್ಕಾರದವರು ಅವರಿಗೆ ಬರೀ ನೂರು ರೂಪಾಯಿ ಪುರಸ್ಕಾನೆಗಳನ್ನು ಹಾಕಬಹುದೇ ?

ಶ್ರೀ ಕೆ. ಹನುಮಂತಯ್ಯ.—ಕೆಲವು ಸಂದರ್ಭಗಳಲ್ಲಿ ಲಂಚ ನಿರೋಧ ಇಲಾಖೆಯವರು ಕೊಡತಕ್ಕ ಶಿಫಾರ್ಸನ್ನು ಒಪ್ಪಿಕೊಳ್ಳಲಾಗುತ್ತದೆ. ಕೆಲವು ಸಂದರ್ಭಗಳಲ್ಲಿ ಅವರು ಕೊಡಬೇಕೆಂದು ಸೂಚಿಸಿತಕ್ಕ ಶಿಕ್ಷೆಗಳು ಉಗ್ರವಾಗಿರುತ್ತವೆಯೆಂದು ಸರ್ಕಾರದವರಿಗೆ ಕಂಡು ಬಂದರೆ ಮತ್ತು ಅಂತಹ ಶಿಕ್ಷೆಗೆ ಒಳಗಾಗತಕ್ಕ ನೌಕರನು 25–30 ವರ್ಷ ಸರ್ವಿಸ್ ಮಾಡಿ ಕೊನೆಯಲ್ಲಿ ಅವನು ಮನೆಗೆ ಹೋಗುವಾಗ ಅಂಥಾ ಶಿಕ್ಷೆಯನ್ನು ಅನುಭವಿಸುವುದು ಕಠಿಣವೆಂಬ ಒಂದು ಕನಿಕರ ಭಾವನೆಯಿಂದ ಕಡಮೆ ಮಾಡತಕ್ಕ ಸಂಭವಗಳೂ ಬರುತ್ತವೆ.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ದೊಡ್ಡ ಅಧಿಕಾರಿಗಳು ಲಂಚಕ್ಕೆ ಕೈಹಾಕಿದರೆ ಅಂಥವರನ್ನು ಕೆಲಸದಲ್ಲಿಟ್ಟುಕೊಳ್ಳುವುದರಿಂದ ಮತ್ತೂ ದೇಶಕ್ಕೆ ತೊಂದರೆಯಾಗುತ್ತದೆಂದು ಗಮನಕ್ಕೆ ಬಂದಿದೆಯೇ ?

ಶ್ರೀ ಕೆ. ಹನುಮಂತಯ್ಯ.—ಆ ತರಹ ತಪ್ಪುಗಳು ಯಾರ ಮೇಲೆ ರುಜುವಾತು ಆಗುತ್ತದೆಯೋ ಅಂಥವರನ್ನು ಕೆಲಸದಲ್ಲಿ ಇಟ್ಟುಕೊಳ್ಳುವುದಿಲ್ಲ. ಆ ರೀತಿ ಕಾನೂನಿನಲ್ಲಿಯೂ ನಿಬಂಧನೆ ಇದೆ.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ಲಂಚ ತೆಗೆದು ಕೊಳ್ಳುವ ಅಧಿಕಾರಿಗಳನ್ನು ನಾವು ಹಿಡಿದುಕೊಟ್ಟರೆ ತಾವು ಅವರನ್ನು ಕೆಲಸದಿಂದ ರಿಟೈರ್ ಆಗುವಂತೆ ಮಾಡುತ್ತೀರಾ ?

ಶ್ರೀ ಕೆ. ಹನುಮಂತಯ್ಯ.—ಮಾಡುತ್ತೇವೆ.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ಲಂಚ ಕೊಟ್ಟವರಿಗೂ ಶಿಕ್ಷೆ ಮಾಡಬೇಕೆಂದು ಹೇಳುತ್ತಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಕೆ. ಹನುಮಂತಯ್ಯ.—ಅಂಥ ಸಂದರ್ಭಗಳಿದ್ದರೆ ನನ್ನ ಗಮನಕ್ಕೆ ತಂದುಕೊಡಿ, ನೋಡೋಣ.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ಲಂಚಕೊಟ್ಟವರಿಗೆ ಶಿಕ್ಷೆ ವಿಧಿಸಲಾಗುತ್ತದೆ ಎಂದು ಹೇಳಿದರೆ ಲಂಚ ಕೊಟ್ಟವರು ನಾವು ಲಂಚ ಕೊಟ್ಟೆವು ಎಂದು ಹೇಳುವುದುಂಟೇ ?

(ಉತ್ತರವಿಲ್ಲ.)

ಶ್ರೀ ಎಂ. ಮಾದಯ್ಯ.—ತಾವು (ಎ) ಪ್ರಶ್ನೆಗೆ ಒದಗಿಸಿರುವ ಉತ್ತರದಲ್ಲಿ ತಿಳಿಸಿರುವ 108 ಜನರಲ್ಲಿ (ಬಿ) ಪ್ರಶ್ನೆಯಲ್ಲಿ ಸೂಚಿಸಿರತಕ್ಕ 36 ಜನರ ಪೈಕಿ 15 ಜನಗಳು ಅದರಲ್ಲಿ ಸೇರಿದ್ದಾರೆಯೇ ?

ಶ್ರೀ ಕೆ. ಹನುಮಂತಯ್ಯ.—ತಾವು ಕೇಳತಕ್ಕ ಪ್ರಶ್ನೆ ಏನು ಎಂಬುದು ನನಗೆ ಅರ್ಥವಾಗಲಿಲ್ಲ.

ಶ್ರೀ ಎಂ. ಮಾದಯ್ಯ.—ಇಲ್ಲಿ 108 ಜನ ಸೂಪರ್-ಅನ್ಯುಯೇಷನ್ ವಯಸ್ಸಾಯಿತೆಂದು ರಿಟೈರ್‌ಮಾಡಿರುವುದಾಗಿ ಹೇಳಿದ್ದೀರಲ್ಲಾ, ಇದರಲ್ಲಿ ಎಷ್ಟು ಜನ ವಯಸ್ಸನ್ನು ಬದಲಾಯಿಸಿದವರು ಸೇರಿದ್ದಾರೆ ?

ಶ್ರೀ ಕೆ. ಹನುಮಂತಯ್ಯ.—ಹಾಗೆ ಬದಲಾವಣೆ ಆಗಿರುವವರ ಹೆಸರುಗಳೂ ಸೇರಿವೆ

ಶ್ರೀ ಎಂ. ಮಾದಯ್ಯ.—ಅವರೆಷ್ಟು ಜನ ? ಸೂಪರ್-ಅನ್ಯುಯೇಷನ್ ತಾರೀಖನ್ನು ಗೊತ್ತು ಮಾಡಲಾಗಿದ್ದರೂ ಕೂಡ ಹೀಗೆ extension of service ಕೊಟ್ಟಿದ್ದೇವೆಂದು ಹೇಳುವುದಕ್ಕೆ ಕಾರಣ ವೇನು ?

Sri A. G. RAMACHANDRA RAO (Minister for Law and Education).—Out of 36 (including 15 cases) where the age of superannuation had passed, the extensions which they got as a matter of course are treated as extensions here.

Mr. SPEAKER.—Question Nos. 337 and 622 may be taken up together.

Power Supply to Irrigation pump-sets.

Q.—337. Sri A. V. NARASIMHA REDDY (Bangalore South).—

Will the Government be pleased to state :—

(*a*) the number of pump-sets supplied with power from April 1952 to January 1953 in Bangalore District (talukwar information may kindly be furnished);

(*b*) the number of estimated works pending execution ?

A.—Sri K. HANUMANTHAIYA (Chief Minister).—

(*a*)—

Bangalore District Taluks	*Irrigation Pumping Sets serviced.*
Anekal ..	16
Hoskote ..	16
Devanhalli ..	56
Bangalore North ..	33
Bangalore South ..	20
Doddaballapur ..	4
Kanakapura ..	10
Channapatna ..	4
Nelamangala ..	2
Ramanagaram ..	5
Magadi ..	1

(*b*)—

Taluks	*Irrigation Pumping Sets.*
Anekal ..	6
Hoskote ..	3
Devanahalli ..	5
Bangalore North ..	17
Bangalore South ..	20
Kanakapura ..	4
Channapatna ..	5
Nelamangala ..	2
Ramanagaram ..	1

Q.—622. Sri M. C. ANJANEYA REDDY (Chintamani).—

Will the Government be pleased to state :—

(*a*) (i) the grant received from the Central Government last year for providing electric power facilities ;

(ii) how it has been distributed ;

(iii) whether the distribution has been done districtwar ;

(iv) the amount sanctioned to Chintamani Taluk ;

(b) (i) the number of applications received requesting help for getting irrigation pumps installed in the taluk ;

(ii) the number that were sanctioned ;

(iii) the number in respect of which the work has been completed ;

(iv) whether they would take steps to complete the work in respect of the remaining applications at least during current year ?

A.—Sri K. HANUMANTHAIYA (Chief Minister).—

(*a*) (i) Grant of Rs. 50 lakhs by way of loan.

(ii)—

District	*Amount allocated.* Rs.
Bangalore ..	3,00,000
Mysore ..	2,00,000
Kolar* ..	5,00,000
Chitaldrug* ..	11,77,000
Mandya ..	1,00,000
Chikmagalur ..	2,50,260
Tumkur* ..	9,94,000
Hassan ..	3,50,000
Shimoga ..	9,56,357

(iii) Yes.

(iv) Kolar District: Rs. 5,00,000 ; no particular allocation made to taluks.

(*b*) (i) Seventy-five.
(ii) Eleven.
(iii) Three.
(iv) Yes.

ಶ್ರೀ ಎ. ವಿ. ನರಸಿಂಹರೆಡ್ಡಿ.—ಬೆಂಗಳೂರು ದಕ್ಷಿಣ ತಾಲ್ಲೂಕಿನಲ್ಲಿ 20 ಎಸ್ಟಿಮೇಟುಗಳ ಕೆಲಸ ಪೂರೈಸದೆ ನಿಂತಿಪೆಯೆಂದು ಹೇಳಿದ್ದೀರಿ. ಯಾವಯಾವುವು ಎಂದು ವಿವರ ಹೇಳುತ್ತೀರಾ ?

ಶ್ರೀ ಕೆ. ಹನುಮಂತಯ್ಯ.—ನೋಟೀಸ್.

ಶ್ರೀ ಎ. ವಿ. ನರಸಿಂಹರೆಡ್ಡಿ.—ಇದರಲ್ಲಿ ಸೋಮನ ಹಳ್ಳಿ, ಉತ್ತರಹಳ್ಳಿಯ ಎಸ್ಟಿಮೇಟು ಕೂಡ ಸೇರಿದೆಯೇ ?

ಶ್ರೀ ಕೆ. ಹನುಮಂತಯ್ಯ.—ಆ ವಿಷಯದಲ್ಲಿ ಅರ್ಜಿಗಳು ಕೂಡ ಬಂದಿವೆ. ಅವುಗಳು ಪರಿಶೀಲನೆಯಲ್ಲವೆ.

ಶ್ರೀ ಎ. ವಿ. ನರಸಿಂಹರೆಡ್ಡಿ.—ಅದರ estimated cost ಎಷ್ಟು ?

ಶ್ರೀ ಕೆ. ಹನುಮಂತಯ್ಯ.—ನೋಟೀಸ್.

Order of priorities observed in Government Press for printing various kinds of matter.

Q.—295. Sri M. V. RAMA RAO (Tumkur).—

Will the Government be pleased to state :—

(*a*) the reasons for not getting the proceedings of the Legislative Assembly printed promptly ;

(*b*) the order of priorities observed in the Government Press for printing the various kinds of matter entrusted to it ;

(*c*) the reason why important Government Orders are found printed in the *Mysore Gazette* many weeks after the dates on which they appear to have been passed ?

A.—Sri A. G. RAMACHANDRA RAO (Minister for Law and Education).—

(*a*) The printing works of the Houses of Legislature are being attended to promptly.

(*b*) The order in which the works received at the Government Press are usually attended to, is as follows :—

(1) The printing works connected with the Houses of Legislature.

(2) Orders of Government and Proceedings of Government, especially those marked "Priority" and "Top Priority."

(3) All other urgent and immediate confidential works received

* Distressed areas.